

'ಒಬ್ಬ ಡಿಟಿಪಿಯವನ ಕಥೆಗಳು' ಎಂಬ ವಾಕ್ಯವನ್ನು ತಲೆಬರಹವಾಗಿ ನೀಡಲಡ್ಡಿಯಿಲ್ಲವೆಂಬ ಪ್ರಕಾಶಕರ ಸೂಚನೆ ಬೇಡವೆಂದುಕೊಂಡೆ. ಅನುಕಂಪದಿಂದ ಯಾರೂ ನನ್ನ ಕಥೆಗಳನ್ನು ಓದುವುದು ಬೇಡ. ಅವರಿಗೆ ಸ್ವಲ್ಪ ಗಂಭೀರವಾಗಿಯೇ ಉತ್ತರಿಸಬೇಕಾಯಿತು.

'ಗೆಳೆಯಾ... ಸಾಹಿತ್ಯದಲ್ಲಿ ಕೂಡ ಈಗ ಮಾರ್ಕೆಟಿಂಗ್‌ನ ಕಾಲ. ಇನ್ನು ನಿನ್ನ ಇಷ್ಟದಂತೆ ನಡೆಯಲಿ.'

ಕಥೆಗಾರನ ಮುನ್ನುಡಿ ನಾಲ್ಕು ಪುಟಗಳನ್ನು ಮೀರಿ ಮುಂದುವರೆದಿತ್ತು. ಪ್ರತಿಯೊಂದು ಶಬ್ದವು ನನ್ನ ಕಥೆಗಳನ್ನು ಮೃದುವಾಗಿ ಸವರಿದ್ದವು. ಪ್ರಿಯಾಳ ಚೀಟಿ ಹಣದಿಂದ ಚಿಕ್ಕಾಸನ್ನೂ ಮನೆ ಖರ್ಚಿಗೆ ಬಳಸದೆ ಪ್ರಕಾಶಕನ ಲೆಕ್ಕಕ್ಕೆ ಜಮಾಯಾಗಿತ್ತು.

ಮುಖಪುಟದ ಚಿತ್ರವೂ ಗಂಭೀರವಾಗಿತ್ತು.

ಫೇಸ್‌ಬುಕ್ಕಿನ ಮೂಲಕ ಪರಿಚಿತನಾದ, ಕವರ್ ಚಿತ್ರಗಳಿಗೆ ಹೆಸರಾದ ಸೌಮ್ಯನಾದ ಆ ಹುಡುಗ ಬರೆದು ಕೊಟ್ಟಿದ್ದ. ಡಿಟಿಪಿ ಸೆಂಟರ್‌ನಲ್ಲೇ ಇದ್ದು, ಮಾಲೀಕ ರವಿಯಣ್ಣನ ಕಣ್ಣಿಗೆ ಬೀಳದೆ, ಮೊದಲನೆಯ ಪ್ರೂಫ್ ಪ್ರಿಂಟ್ ಔಟ್ ತೆಗೆದು ನಾನು ಓದಲು ಆರಂಭಿಸಿದೆ.

'ಅಪ್ಪಾ ಏನ್ ಓದ್ತಾ ಇದ್ದೀಯಾ?' ಮಗಳು ಬಂದು ಕೇಳಿದಳು. ಅವಳ ಉಡುಪಿನ ತುಂಬಾ ಹೂವುಗಳು. ನನ್ನ ನಿರೀಕ್ಷೆಯ ಹೂವುಗಳು.

'ಮಗಳೇ... ಇದು ಅಪ್ಪ ಬರೆದ ಕಥೆಗಳು...'

'ಇದರಲ್ಲಿ ನರಿ ಮೊಲ ಆನೆಯ ಕಥೆಗಳಿವೆಯಾ? ಹಾಗಾದರೆ ನನಗೆ ಒಂದು ಕಥೆ ಹೇಳ್ಕೊಡು ಅಪ್ಪ...'

ಮಗಳನ್ನು ಎತ್ತಿ ಮಡಿಲಲ್ಲಿ ಕೂರಿಸಿಕೊಂಡೆ. ಅವಳು ಕೇಳಿದ ಪ್ರಶ್ನೆಯಿಂದ ಬೆಚ್ಚಿ ಹೋದೆ.

'ಈ ಕಥೆಗಳಲ್ಲಿ ಆನೆ ಮೊಲಗಳಿಲ್ಲ. ಆ ಸಾಧು ಪ್ರಾಣಿಗಳಿಗಿಂತ ಭೀಕರವಾದ ಮನುಷ್ಯರ ಕಥೆಗಳಿವೆ. ಅವನ ಪ್ರೀತಿಯ, ಕಾಮದ, ಬಯಕೆಯ, ಸೋಲಿನ, ದುರಂತಗಳ, ಅತಿಯಾಸೆಗಳ, ಪರಪೀಡನೆಯಾನುಭವಗಳ ಕಥೆಗಳು' ಅವಳು ನನ್ನ ಮುಖವನ್ನೇ ನೋಡಿ ಪುನಃ ಕೇಳಿದಳು.

'ಕಥೆ ಹೇಳ್ಕೊಡು ಅಪ್ಪ..'

'ಇದು ದೊಡ್ಡವರಿಗಿರುವ ಕಥೆಗಳು ಮಗಳೇ...'

ಅವಳು ಕೋಪದಿಂದ ಮಡಿಲಿನಿಂದ ಇಳಿದು ಹೋದಳು.

ಅವಳು ಹೋಗುವುದನ್ನು ಕಂಡಾಗ ನಾನು ಹೇಳಿದ್ದು, ಎಷ್ಟು ಮೂರ್ಖತನವಾಯಿತೆಂದು ಪಶ್ಚಾತ್ತಾಪ ಪಟ್ಟೆ. ಪ್ರೌಢರಿಗೆ ಮಾತ್ರವೇನು ಕಥೆಗಳಿರುವುದು. ನನ್ನ ಕಥೆಗಳನ್ನು ಓದಿದರೆ ಮಕ್ಕಳು ಹೇಗೆ ಪ್ರತಿಕ್ರಿಯಿಸುತ್ತಾರೆ? ನಿಜವಾಗಿಯೂ ಬಾಲ